ಅ) ಐ. ಪಿ. ಎಸ್. ಮಹಿಳೆಯರಿಗೆ ಪ್ರತ್ಯೇಕವಾದ ಪೋಲೀಸ್ ತರಬೇತಿ ಕೇಂದ್ರವಿರುವುದಿಲ್ಲ. ಇವರುಗಳು ಪೋಲೀಸ್ ತರಬೇತಿ ಅಕಾಡೆಮಿ ಹೈದರಾಬಾದ್ ಹಾಗೂ ಪೋಲೀಸ್ ತರಬೇತಿ ಕಾಲೇಜು ಮೈಸೂರು, ಇಲ್ಲಿ ಪುರುಷ ಕೆಡೆಟ್‌ಗಳ ಜೊತೆಯಲ್ಲಿ ತರಬೇತಿಯನ್ನು ಪಡೆಯುತ್ತಾರೆ.

ಆ) ಪತ್ರಾಂಕಿತರಲ್ಲದ ಮಹಿಳೆಯರಿಗೆ ಮೈಸೂರಿನ ಪೋಲೀಸ್ ತರಬೇತಿ ಕಾಲೇಜಿನಲ್ಲಿ ಪ್ರತ್ಯೇಕವಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಚಿತ್ರನಗರಿ ನಿರ್ಮಾಣದ ಬಗ್ಗೆ

೬೧೯. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮಂಖ್ಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಸರುಘಟ್ಟದ ಬಳಿ '' ಚಿತ್ರನಗರಿ '' ನಿರ್ಮಾಣ ಮಾಡಲು ಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿರುವರೆ, ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಆ) ಇದುವರೆವಿಗೆ ಈ ಯೋಜನೆಗಾಗಿ ಸರ್ಕಾರವು ಕೊಟ್ಟಿರುವ ಧನಸಹಾಯ ಪೆಷ್ಟು ?

ಇ) ಈ '' ಚಿತ್ರನಗರಿ '' ಯೋಜನೆಯು ಎಷ್ಟು ಕಾರ್ಯಗತವಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮಂಖ್ಯಿ ಮಂತ್ರಿಗಳು).—

ಅ) ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮವು ಹೆಸರು ಘಟ್ಟದಲ್ಲಿರುವ ತನ್ನ ೩೪೭ ಎಕರೆ ಭೂಮಿಯಲ್ಲಿ '' ಚಿತ್ರನಗರಿ '' ನಿರ್ಮಾಣ ಮಾಡಲು ಯೋಜನೆಯನ್ನು ಹಾಕಿಕೊಂಡಿದೆ.

ಆ) ಈ ಯೋಜನೆಯನ್ನು ಕಾರ್ಯಗತ ಗೊಳಿಸಲು ಸ್ವಲ್ಪ ಆರ್ಥಿಕ ನೆರವು ನೀಡುವಂತೆ ಮತ್ತು ಬ್ಯಾಂಕುಗಳಿಂದ ಪಡೆಯಲು ಉದ್ದೇಶಿಸಿರುವ ಸಾಲಗಳಿಗೆ ಸರ್ಕಾರವು ಗ್ಯಾರಂಟಿ ನೀಡಬೇಕೆಂದು ನಿಗಮವು ಸರ್ಕಾರವನ್ನು ಕೋರಿದೆ. ನಿಗಮದ ಬೇಡಿಕೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರವು ಈ ಯೋಜನೆಗೆ ಯಾವ ಹಣವನ್ನೂ ಕೊಟ್ಟಿರುವುದಿಲ್ಲ.

ಈ) '' ಚಿತ್ರನಗರಿ ,, ನಿರ್ಮಿಸುವ ಉದ್ದೇಶದಿಂದ, ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮವು ಹೆಸರು ಘಟ್ಟದಲ್ಲಿರುವ ತನ್ನ ಭೂಮಿಯಲ್ಲಿ ಪ್ರೊಜೆಕ್ಟರ್ ಫ್ಯಾಕ್ಟರಿ ಹಾಗೂ ಕಲರ್ ಲ್ಯಾಬ್‌ಗಳನ್ನು ಕಟ್ಟಲು ತಳಪಾಯವನ್ನು ಹಾಕಿದೆ. ಈ ಭೂಮಿಯಲ್ಲಿ ಚಿತ್ರೀಕರಣಕ್ಕೋಸ್ಕರ ಉದ್ಯಾನವನವನ್ನು ಬೆಳಿಸಲಾಗುತ್ತಿದೆ. ಇದಲ್ಲದೆ ಹಣ್ಣು ಹಂಪಲುಗಳ ಗಿಡಗಳನ್ನು ಮತ್ತು ಹೂದೋಟವನ್ನು ಬೆಳಸಲಾಗಿದೆ.

ರಾಜ್ಯ ಪ್ರವಾಸಿ ಕೇಂದ್ರಗಳಲ್ಲಿನ ಸೌಲಭ್ಯಗಳ ಬಗ್ಗೆ

೬೧೪. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿವಿಧ ಭಾಗಗಳಲ್ಲಿ ಸರ್ಕಾರದ ಅಧೀನದಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳಿವೆ ?

ಆ) ಈ ಪ್ರವಾಸಿ ಕೇಂದ್ರಗಳಿಗೆ ಬರುವ ಪ್ರವಾಸಿಗಳಿಗೆ ಸರ್ಕಾರದವರು ಒದಗಿಸುತ್ತಿರುವ ಸೌಲಭ್ಯಗಳೇನು ಹಾಗೂ ಹೊಸದಾಗಿ ಯಾವ ಯಾವ ಸ್ಥಳಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) (ಒಂಭತ್ತು)

ಆ) ಪ್ರವಾಸಿ ಕೇಂದ್ರಗಳಿಗೆ ಬರುವ ಪ್ರವಾಸಿಗರಿಗೆ, ಸರ್ಕಾರವು ವಸತಿ ಸೌಕರ್ಯ ಮತ್ತು ಉಪಹಾರ ಗೃಹ ಸೌಲಭ್ಯಗಳನ್ನು ಒದಗಿಸಿರುತ್ತದೆ.

ಸರ್ಕಾರ ಹೊಸದಾಗಿ, ಈ ಕೆಳಗಿನ ಸ್ಥಳಗಳಲ್ಲಿ ಪ್ರವಾಸಿ ಸೌಲಭ್ಯ ಒದಗಿಸಲು ಕ್ರಮ ಕೈಗೊಂಡಿದೆ,

೧) ಮೂಡಬಿದ್ರೆ ಮತ್ತು ಕಾರ್ಕಳದಲ್ಲಿ ಈಗಿರುವ ಪ್ರವಾಸಿ ಕುಟೀರಗಳ ಜೊತೆಗೆ ಉಪಹಾರ ಗೃಹ ಹಾಗೂ ಊಟದ ಕೊಠಡಿ ಸೌಲಭ್ಯ.

೨) ತಲಕಾಡು, ಮದ್ದೂರು, ಮುಳಬಾಗಿಲು, ಹುಮನಬಾದ್, ಮಾಚೇನಹಳ್ಳಿ (ಗುಂಡ್ಲು ಪೇಟೆ) ರಾಮನಗರಂ (ಸೂಪಾ) ಕೋಲಾರ ಮತ್ತು ಆಗುಂಬೆಯಲ್ಲಿ ಹೆದ್ದಾರಿ ಸೌಲಭ್ಯಗಳನ್ನು ಒದಗಿಸುವುದು.

೩) ಜೋಗ್ ಜಲಪಾತ, ಶ್ರೀರಂಗಪಟ್ಟಣ, ಶೃಂಗೇರಿ, ದತ್ತಾತ್ರೇಯ ಪೀಠ, ಸೌಂದತ್ತಿ ಗಳಲ್ಲಿ ಉಪಹಾರ ಗೃಹ ಮತ್ತು ಶೌಚಾಲಯ ಸೌಲಭ್ಯ.

೪) ಮುತ್ಯಾಲಮಡುವಿನಲ್ಲಿ ಪಿಕ್‌ನಿಕ್ ಮನೋರಂಜನಾ ಸೌಲಭ್ಯ.

೫) ಬೇಂದ್ರೆ ತೀರ್ಥದಲ್ಲಿ ಶೌಚಾಲಯ ಮತ್ತು ಉಡುಪುಗಳನ್ನು ಬದಲಾಯಿಸುವ ಕೊಠಡಿಗಳು

೬) ಮೇಕೆದಾಟು, ಬಾದಾಮಿಗಳಲ್ಲಿ ಹೆಚ್ಚುವರಿ ಸೌಲಭ್ಯ.

೭) ಸೋಗಲದಲ್ಲಿ (ಬೈಲು ಹೊಂಗಲ) ಶೀಘ್ರ ಊಟದ ವ್ಯವಸ್ಥೆಯ ಸೌಲಭ್ಯ (ಫಾಸ್ಟ್ ಫುಡ್ ಸರ್ವೀಸ್ ಕೌಂಟರ್)

೮) ಬೇಲೂರಿನಲ್ಲಿ ೨೫ ಕೊಠಡಿಗಳ ನಿರ್ಮಾಣ ಹಾಗೂ ೨ ಸಮುದಾಯ ಕೊಠಡಿಗಳು(ಡಾರ್ಮೆಟರಿಸ್) ಸೌಲಭ್ಯ

ಬೈಲಹೊಂಗಲ ಬಸ್ ಸ್ಟ್ಯಾಂಡ್ ಸುಧಾರಣೆ ಬಗ್ಗೆ

೭೬೭. ಶ್ರೀ ಶಿವಾನಂದ ಹೆಚ್. ಕೌಜಲಗಿ(ಬೈಲಹೊಂಗಲ).—ಮಾನ್ಯ ಸಾರಿಗೆ,ಸಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸ್ ನಿಲ್ದಾಣದಲ್ಲಿ ಡಾಂಬರು ಮಾಡುವುದು, ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ವೀರಣ್ಣ(ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಬಸ್ ನಿಲ್ದಾಣದ ಆವರಣಕ್ಕೆ ೧೯೮೭-೮೮ನೇ ಸಾಲಿನಲ್ಲಿ ಡಾಂಬರು ಹಾಕಲಾಗುವುದು.

ದೊಡವಾಡ ಗ್ರಾಮದಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವ ಬಗ್ಗೆ

೭೪೭. ಶ್ರೀ ಶಿವಾನಂದ, ಹೆಚ್. ಕೌಜಲಗಿ (ಬೈಲಹೊಂಗಲ) ಮಾನ್ಯ ಸಾರಿಗೆ ಸಣ್ಣ ಉಳಿತಾಯ ಮಂತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡವಾಡ ಗ್ರಾಮದಲ್ಲಿ ಬಸ್ಸು ನಿಲ್ದಾಣದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅದನ್ನು ಕಟ್ಟಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮಂತ್ತು ಬಂಧೀಖಾನೆ ರಾಜ್ಯ ಮಂತ್ರಿಗಳು).—

ಅ) ತಂಗು ನಿಲ್ದಾಣದ ಅವಶ್ಯಕತೆಯಿದೆ,

ಆ) ಸೂಕ್ತವಾದ ನಿವೇಶನ ದೊರೆತಿದ ನಂತರ ತಂಗುದಿ ನಿಲ್ದಾಣವನ್ನು ನಿರ್ಮಿಸಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.